ಅ) ಡಿಸೆಂಬರ್ ೧೯೮೬ ರಿಂದ ಇದುವರೆಗೂ ಪರೀಕ್ಷೆ ನಡೆಸಲು ಕ್ರಮ ತೆಗೆದುಕೊಳ್ಳದಿರಲು ಕಾರಣವೇನು ?

ಇ) ಪರೀಕ್ಷೆ ಯಾವಾಗ ನಡೆಸಲಾಗುತ್ತದೆ, ಹಾಗೂ ಭರ್ತಿ ಮಾಡಬೇಕಾದ ಹುದ್ದೆಗಳ ಬಗ್ಗೆ ಸಂಪೂರ್ಣ ಮಾಹಿತಿ ಕೊಡುವುದು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ಕರ್ನಾಟಕ ಲೋಕ ಸೇವಾ ಆಯೋಗವು ದಿನಾಂಕ ೨-೧೨-೧೯೮೬ ರಿಂದ ಪರೀಕ್ಷೆಗಳನ್ನು ಪ್ರಾರಂಭಿಸಲು ಉದ್ದೇಶಿಸಿತ್ತು. ಆದರೆ, ಈ ಮಧ್ಯೆ ರಾಜ್ಯ ಸರ್ಕಾರವು ದಿನಾಂಕ ೧೨-೧೨-೧೯೮೬ ರಂದು ಪುನಃ ವರ್ಗೀಕರಿಸಿದ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ಪರಿಷ್ಕೃತ ರೋಸ್ಟರ್ ಆದೇಶ ಹೊರಡಿಸಿತು. ಈ ಆದೇಶದ ಅನ್ವಯ ಮೀಸಲಾತಿ ಸೌಲಭ್ಯವನ್ನು ಈಗಾಗಲೇ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಗಳಿಗೂ ನೀಡಬೇಕಾಗಿದ್ದುದರಿಂದ ನಿಗದಿತ ದಿನಾಂಕದಂದು ಪರೀಕ್ಷೆಗಳನ್ನು ಪ್ರಾರಂಭಿಸಲು ಸಾಧ್ಯವಾಗಲಿಲ್ಲ. ಪರೀಕ್ಷೆಗಳನ್ನು ಮುಂದಕ್ಕೆ ಹಾಕಿದ್ದರಿಂದ ೧೯೮೬ನೇ ಸಾಲಿನ ಪರೀಕ್ಷೆಗಳಿಗೆ ಗರಿಷ್ಠ ವಯೋಮಿತಿ ಒಳಗಿದ್ದ ಅಭ್ಯರ್ಥಿಗಳು ನಂತರದ ಪರೀಕ್ಷೆಗಳಿಗೆ ಗರಿಷ್ಠ ವಯೋಮಿತಿ ಮೀರುವ ಸಾಧ್ಯತೆಗಳಿತ್ತು. ಇದನ್ನು ತಪ್ಪಿಸಲು ಹೊಸ ನಿಯಮಗಳನ್ನು ಹೊರಡಿಸಬೇಕಾಗಿದ್ದುದರಿಂದ ಪರೀಕ್ಷೆಗಳನ್ನು ಪ್ರಾರಂಭಿಸಲು ವಿಳಂಬವಾಯಿತು.

ಇ) ಲೋಕ ಸೇವಾ ಆಯೋಗವು ೧೯೪೭ ಡಿಸೆಂಬರ್ ತಿಂಗಳಲ್ಲಿ ಪರೀಕ್ಷೆಗಳನ್ನು ನಡೆಸಲು ಉದ್ದೇಶಿಸಿದೆ. 'ಎ' ಗುಂಪಿನ ಹುದ್ದೆಗಳಲ್ಲಿ ಸುಮಾರು ೬೦ ಸ್ಥಾನಗಳು ಮತ್ತು 'ಬಿ' ಗುಂಪಿನ ಹುದ್ದೆಗಳಲ್ಲಿ ೧೭೯ ಸ್ಥಾನಗಳು ಖಾಲಿ ಇವೆ.

ಶ್ರೀ ಎ. ಎಂ. ಹಿಂಡಸಗೇರಿ.—ಕ್ಯಾಸ್ಟ್‌ವೈಸ್ ಕ್ಲಾಸಿಫಿಕೇಶನ್ ಮಾಡಲಿಕ್ಕೆ ಒಂದೊಂದು ವರ್ಷ ತೆಗೆದುಕೊಂಡರೆ ಅಭ್ಯರ್ಥಿಗಳು ಏನು ಮಾಡಬೇಕು ? ಅವರಿಗೆ ವಯಸ್ಸು ಜಾಸ್ತಿಯಾಗುವುದಿಲ್ಲವೆ ?

ಶ್ರೀ ರಾಮಕೃಷ್ಣ ಹೆಗಡೆ.—ಯಾವುದೇ ಅಭ್ಯರ್ಥಿಗಳಿಗೆ ಅನ್ಯಾಯವಾಗದಂತೆ ನಾವು ನೋಡಿಕೊಂಡಿದ್ದೇವೆ. ಹಿಂದುಳಿದ ವರ್ಗಗಳ ಪಟ್ಟಿಯನ್ನು ಪುನರ್ ವರ್ಗೀಕರಣ ಮಾಡುವಂತಹ ಪ್ರಸಂಗ ಬಂದಿದ್ದರಿಂದ, ಕೇವಲ ಹೊಸ ರೋಸ್ಟರ್ ಸಿಸ್ಟಮ್ ಇಂಟರ್‌ಡ್ಯೂಸ್ ಮಾಡುವುದು ಅಷ್ಟೇ ಅಲ್ಲ, ಹಿಂದೆ ಯಾರು ಅರ್ಜಿ ಹಾಕಿದ್ದಾರೆ ಅಂತಹ ಅಭ್ಯರ್ಥಿಗಳಿಗೂ ಅವಕಾಶ ತಪ್ಪಿಸಬಾರದೆಂದು ಅವರ ವಯೋಮಿತಿ ಮೀರಿದ್ದರೂ ಅದನ್ನು ಎಕ್ಸಂಪ್ಷನ್ ಮಾಡಲಿಕ್ಕೆ ಸೇವಾ ನಿಯಮಗಳನ್ನೇ ತಿದ್ದುಪಡಿ ಮಾಡಬೇಕಾಯಿತು. ಅದಕ್ಕಾಗಿ ಸಮಯ ಹಿಡಿಯಿತು. ಯಾರಿಗೂ ಅನ್ಯಾಯವಾಗುವುದಿಲ್ಲ. ಹಿಂದೆ ಯಾರ್ಯಾರು ಅರ್ಜಿ ಹಾಕಿದ್ದಾರೆ ಅಂತಹವರನ್ನು ಮೌಖಿಕ ಪರೀಕ್ಷೆಗೆ ಕರೆಯಿಸಿದ್ದಾರೆ. ಎರಡು ವರ್ಷಗಳ ರೆಕ್ರೂಟ್‌ಮೆಂಟ್ ಒಂದು ಸಲ ಆಗುತ್ತದೆ.

ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯುವುದು

೩೪೦) ಅ) **ಶ್ರೀ ಬಸವರಾಜ್ ಪಾಟೀಲ್ (ಹುಮನಾಬಾದ್).—**ಪೌರ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಐನೂರು ಪಡಿತರ ಚೀಟಿ ಹೊಂದಿದ್ದರೆ, ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಸರ್ಕಾರದವರ ಕಾಯ್ದೆ ಇದೆಯೇ ?

ಆ) ಎರಡು ಅಥವಾ ಮೂರು ಗ್ರಾಮಗಳನ್ನು ಒಟ್ಟಿಗೆ ಸೇರಿಸಿ ನ್ಯಾಯಬೆಲೆ ಅಂಗಡಿಗಳನ್ನು ತೆಗೆಯುವುದರಿಂದ ಗ್ರಾಮದ ಜನತೆಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಹೌದು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಸವರಾಜ್ ಪಾಟೀಲ್.—ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಎರಡು ಮೂರು ಗ್ರಾಮಗಳನ್ನು ಒಟ್ಟಿಗೆ ಸೇರಿಸಿ ನ್ಯಾಯಬೆಲೆ ಅಂಗಡಿಗಳನ್ನು ತೆರೆಯುವುದರಿಂದ ಜನರಿಗೆ ತೊಂದರೆಯಾಗುವುದಿಲ್ಲವೇ ಎಂದು ಕೇಳಿದ್ದಕ್ಕೆ ಇಲ್ಲವೆಂದು ಹೇಳಿದ್ದಾರೆ. ಐನೂರು ರೇಷನ್ ಕಾರ್ಡ್ಸ್ ಇದ್ದರೆ ಒಂದು ನ್ಯಾಯಬೆಲೆ ಅಂಗಡಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಎರಡು-ಮೂರು-ನಾಲ್ಕು ಹಳ್ಳಿಗಳನ್ನು ಒಟ್ಟಿಗೆ ಸೇರಿಸಿ ಒಂದು ನ್ಯಾಯಬೆಲೆ ಅಂಗಡಿಯನ್ನು ಕೊಟ್ಟರೆ ಆಹಾರಧಾನ್ಯಗಳನ್ನು ಹೇಗೆ ಹಂಚುತಿರಿ ? ಇದಕ್ಕಾಗಿಯೇ ಅವರು ನಾಲ್ಕೈದು ಕಿಲೋಮೀಟರ್ ದೂರ ಬಂದು ತೆಗೆದುಕೊಂಡು ಹೋಗಬೇಕಾ ? ಈ ಅಂಗಡಿಯಿರೇ ಹಳ್ಳಿಯಿಂದ ಹಳ್ಳಿಗೆ ಪಡಿತರ ಪದಾರ್ಥಗಳನ್ನು ಒಯ್ಯುವ ವ್ಯವಸ್ಥೆ ಮಾಡಿದ್ದಾರೆಯೇ ? ತೊಂದರೆ ಆಗುವುದಿಲ್ಲವೆಂದು ಹೇಗೆ ಉತ್ತರ ಕೊಡುತ್ತೀರಿ ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರು ಕೇಳಿದಂಥ ಪ್ರಶ್ನೆಯಲ್ಲಿ ತೊಂದರೆಯಾಗುತ್ತಿರುವ ಬಗ್ಗೆ ಎಲ್ಲಿಯಾದರೂ ದೂರು ಬಂದಿದೆಯೇ ಎಂದು ಕೇಳಿದ್ದಾರೆ. ಇಲ್ಲಿಯವರೆಗೆ ದೂರು ಬಂದಿಲ್ಲವೆಂದು ಹೇಳಿದ್ದೇನೆ. ಎಲ್ಲಿಯಾದರೂ ತೊಂದರೆ ಆಗಿದ್ದು ಆದರ ಬಗ್ಗೆ ನಿರ್ದಿಷ್ಟ ಮಾಹಿತಿ ಕೊಟ್ಟರೆ ಆದರ ಬಗ್ಗೆ ನಾವು ಒಂದು ವ್ಯವಸ್ಥೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈಗಾಗಲೇ ಇದು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುವುದರಿಂದ ಜಿಲ್ಲಾ ಪರಿಷತ್ತಿನವರೇ ತಮಗೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ಹಂಚಿಕೆ ವ್ಯವಸ್ಥೆ ಮಾಡುವುದಕ್ಕೆ ಅಧಿಕಾರ ಹೊಂದಿದ್ದಾರೆ. ಆ ತರಹವೇ ಅವರು ಮಾಡಿಕೊಳ್ಳಬಹುದು. ಮಾನ್ಯ ಶಾಸಕರು ತಮ್ಮ ಕ್ಷೇತ್ರದಲ್ಲಾಗಲೀ ಜಿಲ್ಲೆಯಲ್ಲಾಗಲಿ ಇಂಥಾದ್ದೇನಾದರೂ ತೊಂದರೆ ಇದ್ದು, ಮೂರು ಕಿಲೋಮೀಟರ್ ದೂರ ಇರತಕ್ಕಂಥ ಪ್ರದೇಶದೊಳಗೆ ಜನರಿಗೆ ತೊಂದರೆಯಾಗಿರುವುದನ್ನು ತಿಳಿಸಿದರೆ ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಬರೆದು ಸೂಕ್ತ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಪಡುತ್ತೇನೆ.

ಶ್ರಿ ಬಸವರಾಜ ಪಾಟೀಲ್.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ರೂಲ್ಸ್ ರೆಗ್ಯುಲೇಷನ್ಸ್ ನಿಮಗೆ ಗೊತ್ತಿಲ್ಲವೇನು ? ನಿಮ್ಮ ನಾಯಕರು ಎದ್ದು ನಿಂತಿದ್ದಾರೆ. ಅವರು ಎದ್ದುನಿಂತರೆ ನೀವು ಕುಳಿತುಕೊಳ್ಳಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಹಂಚಿಕೆ ಬಗ್ಗೆ ವ್ಯವಸ್ಥೆ ಸರಿಯಿಲ್ಲ. ಜಿಲ್ಲಾಪರಿಷತ್ ಸೆಕ್ರೆಟರಿ ಬರೆದರೂ ಪ್ರೆಸಿಡೆಂಟ್ ಕೇಳುವ ಹಾಗಿಲ್ಲ. ಎಲ್ಲಾ ಪ್ರಿಸ್ಟಿಜ್ ಇಷ್ಯೂ ಆಗಿ ತೆಗೆದುಕೊಂಡು ಬಿಡುತ್ತಾರೆ. ಪ್ರೆಸಿಡೆಂಟರು ಬರೆದಂಕೊಟ್ಟರೆ ತಾಲ್ಲೂಕು ಮಟ್ಟದಲ್ಲೇ ಇರುತ್ತದೆ, ಪ್ರೆಸ್ಟಿಜ್ ಇಷ್ಯೂ ನೀಡಾಗಿ ಕೊಟ್ಟಿರುವುದನ್ನು ರಸೀತಿ ಹಾಕಿ ಫುಡ್ ಲಿಫ್ಟ್ ಮಾಡುವುದಕ್ಕೆ ಬರುವುದಿಲ್ಲ. ಒಂದು ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳವರಿಗೆ ಬರೆದು ತಿಳಿಸಬೇಕಾದಂಥ ಪ್ರಸಂಗ ಬಂತು. ತಮಗೆ ಇಷ್ಟಬಂದವರಿಗೆ ಕೊಡುತ್ತಾರೆ. ಈ ಪದ್ಧತಿಯನ್ನು ತೆಗೆದುಹಾಕಬೇಕಾದ್ದು ಸೂಕ್ತ. ಇದಕ್ಕೆ ಸರ್ಕಾರದವರು ಏನಾದರೂ ಔಷಧಿಯನ್ನು ಕಂಡುಹಿಡಿಯಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಅಲ್ಲಿ ಇಲ್ಲಿ ಒಂದೊಂದು ದೋಷ ಇದೆಯೆಂದು ಹೇಳಿ.....

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದು ಎಲ್ಲಾ ಕಡೆಯೂ ಇದೆ.....

ಶ್ರೀ ರಾಮಕೃಷ್ಣ ಹೆಗಡೆ.—ಈ ಪದ್ಧತಿಯನ್ನೇ ತೆಗೆದುಹಾಕತಕ್ಕದ್ದು ಸರಿ ಅಲ್ಲ. ಶ್ರೀಮತಿ ನಾಗರತ್ನಮ್ಮನವರು ಒಂದು ವಿಚಾರದಲ್ಲಿ ನನಗೆ ಪತ್ರ ಬರೆದಿದ್ದರು. ಆದರ ಬಗ್ಗೆ ಅವರಿಗೆ ಸಮಾಧಾನವಾಗುವ ಹಾಗೆ ನಾನು ಕ್ರಮ ತೆಗೆದುಕೊಂಡಿದ್ದೇನೆ.

ಶ್ರೀ ಜೆ. ಹೆಚ್. ಪಟೇಲ್.—ಅಧ್ಯಕ್ಷರೇ, ಈ ಪ್ರೆಸ್ಟೀಜ್ ಬೆಂಗಳೂರಿನಲ್ಲಿ ಕಾನ್‌ಸಂಟ್ರೇಟ್ ಮಾಡಬಾರದು ಎಂದು ಡಿಸೆಂಟ್ರಲೈಸ್ ಮಾಡಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇವರು ಡಿಸೆಂಟ್ರಲೈಜ್ ಮಾಡಿರುವುದು ಇಂಥಾದ್ದನ್ನೇ. ಬಾಕಿ ಇರುವುದನ್ನು ಸೆಂಟ್ರಲೈಸ್ ಮಾಡಿಕೊಂಡರು.

ಶ್ರೀ ಬಸವರಾಜ್ ಪಾಟೀಲ್ .—ಮಾನ್ಯ ಅಧ್ಯಕ್ಷರೇ,.....

ಅಧ್ಯಕ್ಷರು.—ನಿಮಗೆ ನಾನು ಅವಕಾಶ ಕೊಡುವುದಿಲ್ಲ. ಶ್ರೀ ಯಂಕಾ ನಾಯಕ್ ಅವರೇ ನೀವು ಪ್ರಶ್ನೆ ಕೇಳಿ.

ಶ್ರೀ ಬಸವರಾಜ್ ಪಾಟೀಲ್,—ಅಧ್ಯಕ್ಷರೇ.....

ಅಧ್ಯಕ್ಷರು.—ನಿಮಗೆ ಅವಕಾಶ ಇಲ್ಲ. ಶ್ರೀ ಯೆಂಕಾನಾಯಕ್ ಅವರನ್ನು ನಾನು ಕರೆದಿದ್ದೇನೆ ಶ್ರೀ ಬಸವರಾಜ್ ಪಾಟೀಲ್ ಅವರು ಏನೇ ಮಾತನಾಡಿದರೂ ಅದು ರೆಕಾರ್ಡಿಗೆ ಹೋಗುವುದಿಲ್ಲ.

ಹರಪನ ಹಳ್ಳಿಯಲ್ಲಿ ಅಗ್ನಿ ಶಾಮಕದಳ ಇಲ್ಲದಿರುವುದು

೧೭೩. ಶ್ರೀ ಬಿ. ಹೆಚ್. ಯಂಕನಾಯಕ (ಹರಪನ ಹಳ್ಳಿ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು ಅಗ್ನಿಶಾಮಕದಳವಿಲ್ಲದೆ ಅನೇಕ ತೊಂದರೆಗಳು ಉದ್ಭವಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ಹಿಂದೆ ಅಗ್ನಿ ದುರಂತ ಸಂಭವಿಸಿದಾಗ ಹೊಸಪೇಟೆಯಿಂದ ಅಗ್ನಿ ಶಾಮಕದಳದವರು ಬರುವುದು ವಿಳಂಬವಾಗಿ ಮತ್ತಷ್ಟು ದುರಂತಕ್ಕೆ ಈಡಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಹರಪನಹಳ್ಳಿ ತಾಲ್ಲೂಕು ಕೇಂದ್ರದಲ್ಲಿ ಅಗ್ನಿ ಶಾಮಕದಳದ ಉಪಕೇಂದ್ರವನ್ನು ಸ್ಥಾಪಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಆರ್. ಎಲ್. ಜಾಲಪ್ಪ (ಗೃಹಮಂತ್ರಿ).—

ಅ) ಇಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

೧೨-೦೦ ಮಧ್ಯಾಹ್ನ

ಶ್ರೀ ಆರ್. ಎಲ್. ಜಾಲಪ್ಪ.—ಈಗಾಗಲೇ ಬಳ್ಳಾರಿ ಹೊಸಪೇಟೆ, ಸಂಡೂರುಗಳಲ್ಲಿ ಫೈರ್ ಸ್ಟೇಷನ್‌ಗಳಿವೆ. ಬೆಂಗಳೂರು ಜಿಲ್ಲೆಯನ್ನು ಬಿಟ್ಟರೆ ಇದೇ ಜಿಲ್ಲೆಯಲ್ಲಿ ಜಾಸ್ತಿ ಇರುವುದು. ಹರಪನಹಳ್ಳಿಯಿಂದ ದಾವಣಗೆರೆ ೫೦ ಕಿ.ಮೀ. ಹರಪನಹಳ್ಳಿಯಿಂದ ಹೊಸಪೇಟೆಗೆ ೮೦ ಕಿ.ಮೀ. ಇದೆ. ನಾವು ಎಲ್ಲಾ ಕಡೆ ಈ ಫೈರ್ ಸ್ಟೇಷನ್ ಮಾಡುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಮಾನ್ಯ ಅಧ್ಯಕ್ಷರೇ, ಹರಪನಹಳ್ಳಿಯಿಂದ ಹೊಸಪೇಟೆಗೆ ೮೦ ಕಿ.ಮೀ. ಇದೆ. ನಾನು ಈಗ್ಗೆ ೩-೪ ವರ್ಷಗಳಿಂದಲೂ ಇದನ್ನು ಕೇಳುತ್ತಿದ್ದೇನೆ. ಇಲ್ಲಿಯ ಜನಗಳಿಗೆ ಬಹಳ ತೊಂದರೆಯಾಗಿದೆ. ಸಂಡೂರು ಕೂಡ ೭೫ ಕಿ. ಮೀ. ದೂರ ಇದೆ. ಅಲ್ಲಿಂದ ಅಗ್ನಿ ಶಾಮಕದಳದವರು ಬರುವ ಹೊತ್ತಿಗೆ ಮನೆಗಳು ನಾಶವಾಗುತ್ತವೆ. ನಾನು ಹಿಂದೆ ೧೯೮೪-೮೫ ರಲ್ಲೂ ಇದರ ಬಗ್ಗೆ ಪ್ರಶ್ನೆ ಹಾಕಿದಾಗ, ಮಾನ್ಯ ಮಂಖ್ಯಮಂತ್ರಿಗಳು ಮುಂದಿನ ವರ್ಷದಲ್ಲಿ ಪ್ರಾರಂಭ ಮಾಡುತ್ತೇವೆಂದು ಹೇಳಿದರು. ಇಲ್ಲಿಯವರೆಗೂ ಇಲ್ಲಿ ಫೈರ್ ಸ್ಟೇಷನ್ ಆಗಿಲ್ಲ. ದಾವಣಗೆರೆಗೆ ಫೋನ್ ಮಾಡಿದರೆ, ಅಲ್ಲಿಂದ ಡಿ. ಐ ಜಿ. ಫೋನ್ ಮಾಡಿ, ಅಲ್ಲಿಂದ ಅಗ್ನಿಶಾಮಕದಳದವರು ಬರುವ ಹೊತ್ತಿಗೆ ಇಲ್ಲಿ ಹಳ್ಳಿಗಳು ನಾಶವಾಗುತ್ತವೆ. ಹೊಸಪೇಟೆಯಿಂದ ಅಗ್ನಿಶಾಮಕದಳದವರು ಬರುವ ಹೊತ್ತಿಗೂ ಇಲ್ಲಿ ಮನೆಗಳು, ಗುಡಿಸಲುಗಳು ನಾಶವಾಗುತ್ತವೆ. ಆದುದರಿಂದ ದಯವಿಟ್ಟು ಇಲ್ಲಿ ಫೈರ್ ಸ್ಟೇಷನ್ ಕೇಂದ್ರವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.